# ಶ್ರೀ ರಾಮಮಾನಸ ಸ್ತೋತ್ರಮ್ – ೩




**ಜಯ ಜಯತಿ ವಿಷ್ಣೋ ರಾಮನಾಮಾಭಿಧೇಯೋ ।**
**ಜಯತು ಜಯತಿ ಪೂರ್ಣಃ ಕೋಟಿ ಕಂದರ್ಪಭಾಸಃ ॥**
**ಜಯತಿ ಜಯತಿ ವಾದ್ಯೈರ್ನಾಟಕೈರ್ಗೀತ ನೃತ್ಯೈ ।**
**ಜಯ ಜಯ ತಿಮಿರಾರೇ ಗೃಹ್ಣ ನೀರಾಜನಂ ತ್ವಮ್ ॥೮॥**

ಶ್ರೀರಾಮನೆಂಬ ಹೆಸರಿನ ಶ್ರೀವಿಷ್ಣುವಿಗೆ ಜಯವಾಗಲಿ. ಕೋಟಿ ಮದನರ ತೇಜವುಳ್ಳವನೆ, ಪೂರ್ಣನೆ, ನಿನಗೆ ಜಯವಾಗಲಿ. ವಿವಿಧ ವಾದ್ಯಗಳು, ನಾಟಕ, ಸಂಗೀತಗಳಿಂದ ನಿನ್ನ ಸೇವೆ ಮಾಡುತ್ತಿರುವೆನು. ನಿನಗೆ ಜಯವಾಗಲಿ. ಅಂಧಕಾರವನ್ನು (ಅಜ್ಞಾನದ ಕತ್ತಲೆ) ನಿವಾರಿಸುವವನೇ, ನೀರಾಜನವನ್ನು ಸ್ವೀಕರಿಸು. ನಿನಗೆ ಜಯ, ಜಯಕಾರವಾಗಲಿ. ॥ ೮ ॥

**ಸಾಮ್ರಾಜ್ಯ ಭೋಜ್ಯಾದಿ – ಸುಪಾರಮೇಷ್ಠ್ಯಂ ।**
**ತಮತ್ರ ಯಚ್ಚಾಖಿಲ ವಸ್ತು ಜಾತಮ್ ॥**
**ಏಕಾಕ್ಷರಂ ಬ್ರಹ್ಮಮಯಂ ಪ್ರಸಿದ್ಧ –**
**ಮೇವಾರ್ಪಯಾಮೀತಿ ಸುಮಂತ್ರ ಪುಷ್ಪಮ್ ॥ ೯ ॥**

ಸಾಮ್ರಾಜ್ಯ, ಭೋಜ್ಯಾದಿಗಳಿಂದ ಪಾರಮೇಷ್ಠ್ಯದವರೆಗೆ ನಿರ್ಮಿತವಾದ ವಸ್ತುಗಳೆಲ್ಲ ಓಂ ಪದವಾಚ್ಯವಾದ ಪರಬ್ರಹ್ಮಸ್ವರೂಪವಿದ್ದು, ಅವೆಲ್ಲವನ್ನೂ ಉತ್ಕೃಷ್ಟವಾದ ಮಂತ್ರ ಪುಷ್ಪಾಂಜಲಿ ಎಂದು ಅರ್ಪಿಸುತ್ತಿರುವೆನು. ॥ ೯ ॥

**ಜಯ ಜಯ ಕರುಣಾಬ್ಧೇಽನಂತ ಭಾನುಪ್ರಕಾಶ ।**
**ಜಯ ಜಯ ಜಗದೀಶಾವ್ಯಕ್ತ ಮಾಯಾಧಿದೇವ ॥**
**ಜಯ ಜಯ ಧರಣೀಜಾವಲ್ಲಭಾನಂತವೀರ್ಯ ।**
**ಜಯ ಜಯ ರಘುನಾಥಾನಾಥನಾಥ ಪ್ರಸೀದ ॥ ೧೦ ॥**

ಕರುಣಾಸಾಗರ, ಅನಂತ ಸೂರ್ಯಪ್ರಕಾಶ, ನಿನಗೆ ಜಯವಾಗಲಿ. ಜಗದೀಶ, ಅವ್ಯಕ್ತ, ಮಾಯಾಧಿಪನೆ, ನಿನಗೆ ಜಯವಾಗಲಿ. ಭೂಮಾತೆಯ ಕನ್ಯೆ ಸೀತಾದೇವಿಯ ಪತಿಯೆ, ಅತುಲ ಪರಾಕ್ರಮಿಯೆ, ನಿನಗೆ ಜಯವಾಗಲಿ, ಅನಾಥನಾಥ ರಘುನಾಥ, ಪ್ರಸನ್ನನಾಗು, ನಿನಗೆ ಜಯವಾಗಲಿ. ॥ ೧೦ ॥

**ಯಜ್ಞೇಶ ಯಜ್ಞಾಧಿಪ ಯಜ್ಞಪಾಲ ।**
**ಯಶಃಪ್ರದಾಧೋಕ್ಷಜ ರಾಮಚಂದ್ರ ॥**
**ಪ್ರದಕ್ಷಿಣಾಂ ತೇ ಪ್ರಕರೋಮಿ ನಿತ್ಯಂ ।**
**ಪದೇ ಪದೇಽನಂತಮಖಾದಿದಾತ್ರಿಮ್ ॥ ೧೧ ॥**

ಯಜ್ಞೇಶ, ಯಜ್ಞಾಧಿಪ, ಯಜ್ಞರಕ್ಷಕ, ಅಧೋಕ್ಷಜ, ರಾಮಚಂದ್ರ, ಯಶಸ್ಸು ನೀಡುವವನೆ — ನಿತ್ಯವೂ ನಿನಗೆ ಪ್ರದಕ್ಷಿಣೆ ಹಾಕುವೆನು. ನಿನ್ನ ಪ್ರದಕ್ಷಿಣೆಯು ಹೆಜ್ಜೆಹೆಜ್ಜೆಗೂ ಯಜ್ಞಾದಿಗಳ ಫಲವನ್ನು ಕೊಡುತ್ತದೆ. ॥ ೧೧ ॥

— ಶ್ರೀ ಶಂಕರಾಚಾರ್ಯ

ಸೂಕ್ತಿಪ್ರಭ

## ವಾಲ್ಮೀಕಿ ರಾಮಾಯಣದ ಸೂಕ್ತಿಗಳು

ಉತ್ಸಾಹಗೆಡಬಾರದು. ಉತ್ಸಾಹವೇ ಸಕಲ ಸಂಪತ್ತಿಗೂ ಕಾರಣ. ಉತ್ಸಾಹದಿಂದಲೇ ಸುಖ. ಯಾವಾಗಲೂ ಉತ್ಸಾಹವೇ ಸರ್ವಕಾರ್ಯಗಳಿಗೂ ಆದಿ. ಯಾವ ಕಾರ್ಯವಿದ್ದರೂ ಉತ್ಸಾಹ ಇದ್ದರೆ ಮಾತ್ರವೇ ಸಫಲವಾಗುವುದು. *(೫.೨.೧೦-೧೧)*

ಧರ್ಮದಿಂದಲೇ ಅರ್ಥ. ಧರ್ಮದಿಂದಲೇ ಸುಖ. ಸಕಲ ಅಭೀಷ್ಟವೂ ಧರ್ಮದಿಂದ ಕೈಗೂಡುತ್ತದೆ. ಈ ಜಗತ್ತು ಧರ್ಮದ ತಳಹದಿಯ ಮೇಲೆ ನಿಂತಿದೆ. ಶ್ರಮಪಡದೆ ಸುಖದಿಂದ ಸುಖ ದೊರೆಯದು. *(೩.೯.೩೦-೩೧)*

ಕೈಲಾಗದ ಹೇಡಿಯು ವಿಧಿಯನ್ನು ನಂಬುತ್ತಾನೆ. ವೀರರು, ಧೀರರು ವಿಧಿಯನ್ನು ಲೆಕ್ಕಿಸುವುದಿಲ್ಲ. ಯಾವ ಪುರುಷನು ತನ್ನ ಪೌರುಷದಿಂದ ವಿಧಿಯನ್ನು ತುಳಿಯಬಲ್ಲನೋ, ಅವನು ಎಂದಿಗೂ ಕಷ್ಟಕ್ಕೆ ಸಿಲುಕುವುದಿಲ್ಲ. *(೨.೨೩.೧೭)*

ಮುಂದೆ ಅನರ್ಥವು ಸಂಭವಿಸೀತೆಂಬ ಶಂಕೆಯಿದ್ದಾಗ ದೂರದರ್ಶಿಯಾದ ಮನುಷ್ಯನು ಮೊದಲೇ ಅದಕ್ಕೆ ಪರಿಹಾರವನ್ನು ಚಿಂತಿಸಬೇಕು. ಶುಭವನ್ನು ಬಯಸತಕ್ಕವನು ಆಪತ್ತಿಗೆ ಪರಿಹಾರವನ್ನು ನೋಡಿಕೊಳ್ಳಬೇಕು. *(೩.೨೪.೧೧)*

ಪ್ರಿಯವಾದ ಮಾತನ್ನು ಆಡತಕ್ಕವರು ಯಾವಾಗಲೂ ಸುಲಭವಾಗಿ ದೊರೆಯುತ್ತಾರೆ. ಆದರೆ ಅಪ್ರಿಯವಾದರೂ ಹಿತಕರವಾದ ಮಾತನ್ನು ಆಡತಕ್ಕವರು ದುರ್ಲಭ. ಆ ಮಾತನ್ನು ಕೇಳತಕ್ಕವರೂ ದುರ್ಲಭ. *(೩.೩೭.೨)*